ಆಘಾತ. ಆ ತಾಯಿ ಜೀವನಪೂರ್ತಿ ಗಂಡ ಮತ್ತು ಮಗನನ್ನು ಸಂಭಾಳಿಸುತ್ತ, ಅವರ ಹಿತಕ್ಕಾಗಿಯೇ ದುಡಿಯುತ್ತಾ, ತನ್ನ ಆರೋಗ್ಯದ ಕಡೆಗೆ ಗಮನವನ್ನೇ ಕೊಟ್ಟಿರಲಿಲ್ಲ. ಭಾವೇಶನ ದೃಷ್ಟಿಹೀನತೆ, ತಂದೆಯ ಸ್ಕಿಜೊಫ್ರೇನಿಯಾ, ಆರ್ಥಿಕ ಮುಗ್ಗಟ್ಟು ಅವರ ಮೇಲೆ ಸಾಕಷ್ಟು ಜವಾಬ್ದಾರಿಯ ಹೊರೆಯನ್ನು ಹೊರಿಸಿತ್ತು. ತಂದೆಯ ಕಾಯಿಲೆ ಸುಧಾರಿಸಿದ್ದರೂ, ಮಹಾಬಲೇಶ್ವರಕ್ಕೆ ಬಂದ ಮೇಲೂ ಅನೇಕ ಬಾರಿ ರಾತ್ರಿ ಅವರಿಗೆ ಮರುಕಳಿಸುತ್ತಿತ್ತು. ತಾಯಿ ಅರ್ಧ ರಾತ್ರಿಯಲ್ಲಿ ಎದ್ದು ಹೊರಗೋಡುವರು. ವೈದ್ಯರನ್ನು ಹುಡುಕುವರು. ತಂದೆಗೆ ಚಿತ್ರ ವಿಚಿತ್ರವಾದ ಭ್ರಾಂತಿ. ಅವರಿಗೆ ಸದಾ ಯಾರೋ ಬಂದು ತಮ್ಮನ್ನು ಕೊಂದು ಹಾಕುತ್ತಾರೆ ಎಂಬ ಭಯ ಮತ್ತು ಭ್ರಮೆ. ಈ ಭೀತಿ ಆಳವಾಗಿ ಅವರ ಮನಸ್ಸಿನಲ್ಲಿ ನೆಟ್ಟಿತ್ತು. ಅವರಿಗೆ ಆಗಾಗ್ಗೆ ನಿದ್ದೆಯ ಗುಳಿಗೆಯನ್ನು ಕೊಡಬೇಕಾಗುತ್ತಿತ್ತು. ಅದರಿಂದಾಗಿ ದಿನವೆಲ್ಲ ಮಲಗಿರುತ್ತಿದ್ದರು. ಇಂಥಾ ಸಮಯದಲ್ಲಿ, ತಂದೆಯ ಕಚೇರಿಯ ಕೆಲಸವನ್ನೂ ತಾಯಿ ಮಾಡಬೇಕಾಗಿತ್ತು. ಇಷ್ಟೆಲ್ಲ ಹೊರೆಯನ್ನು ಹೆಗಲ ಮೇಲೆ ಹೊತ್ತು ನಡೆದಿದ್ದ ತಾಯಿಗೆ, ಏಕಾಏಕಿ ಕ್ಯಾನ್ಸರ್ ರೋಗ ಬಡಿದಾಗ ಕುಟುಂಬಕ್ಕೆ ದಿಕ್ಕೇ ತೋಚದ ಹಾಗೆ ಆಯಿತು.

ತಾಯಿಯ ಚಿಕಿತ್ಸೆ ಬಾಂಬೆಯ ಟಾಟಾ ಮೆಮೊರಿಯಲ್ ಆಸ್ಪತ್ರೆಯಲ್ಲಿ ಆರಂಭವಾಯಿತು. 1941ರಲ್ಲಿ ಸ್ಥಾಪಿತವಾಗಿದ್ದ ಈ ಆಸ್ಪತ್ರೆ ಕ್ಯಾನ್ಸರ್ ಚಿಕಿತ್ಸೆಗೆ ಪ್ರಸಿದ್ಧವಾಗಿತ್ತು. ಆಕೆಗೆ ಆಗಿರುವುದು ನಾನ್ ಹಾಡ್ಜ್ಕಿನ್ ಲಿಂಫೋಮಾ ಎಂಬ ಲಿಂಫ್ ಗ್ರಂಥಿಗಳಿಗೆ ಸಂಬಂಧಿಸಿದ ಕ್ಯಾನ್ಸರ್ ಕಾಯಿಲೆ ಎಂದು ಅರಿವಾಯಿತು. ಲಿಂಫ್ ಗ್ರಂಥಿಗಳು ನಮ್ಮ ದೇಹದ ರೋಗನಿರೋಧಕ ವ್ಯವಸ್ಥೆ ಸರಿಯಾಗಿ ಕೆಲಸ ಮಾಡಲು ಅತ್ಯಂತ ಅಗತ್ಯವಾದುವು. ಲಿಂಫೋಸೈಟ್ಸ್ ಎಂಬ ಒಂದು ಬಗೆಯ ಬಿಳಿಯ ರಕ್ತಕಣಗಳು ಉತ್ಪತ್ತಿಯಾಗುವುದು ಲಿಂಫ್ ಗ್ರಂಥಿಯಲ್ಲಿ. ಈ ಗ್ರಂಥಿಗಳಿಗೆ ಕ್ಯಾನ್ಸರ್ ಬಡಿದಿತ್ತು. ಅವು ಕೆಲಸ ಮಾಡುವುದನ್ನು ನಿಲ್ಲಿಸಿ ಬಿಟ್ಟಿದ್ದವು. ಲಿಂಫೋಮಾದಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. 'ಹಾಡ್ಜ್ಕಿನ್' ಲಿಂಫೋಮಾ, 'ನಾನ್‌ಹಾಡ್ಜ್ಕಿನ್' ಲಿಂಫೋಮಾ. ಲಿಂಫೋಮಾ ವೈದ್ಯರಂಗದಲ್ಲಿ ಇನ್ನೂ ಪೂರ್ಣವಾಗಿ ಅರ್ಥ ಮಾಡಿಕೊಂಡಿರುವ ಕಾಯಿಲೆ ಅಲ್ಲ. ವರ್ಷದಿಂದ ವರ್ಷಕ್ಕೆ ಲಿಂಫೋಮಾ ಪೀಡಿತ ರೋಗಿಗಳ ಸಂಖ್ಯೆ ಏರುತ್ತಿದೆ.

ಈಗ ಆರಂಭವಾಗಿತ್ತು ಭಾವೇಶ್ ಅವರ ಬದುಕಿನ ಬಲು ದೊಡ್ಡ ಸಂಗ್ರಾಮ. ಇಷ್ಟು ಹೊತ್ತಿಗಾಗಲೆ ಬಾಂಬೆಯ ಅಜ್ಜನ ಕೂಡುಕುಟುಂಬ ಬಿಡಿ ಬಿಡಿಯಾಗಿ ಬೇರ್ಪಟ್ಟಿತ್ತು. ಎಷ್ಟೋ ವ್ಯಾಜ್ಯಗಳೂ ತಲೆ ಎತ್ತಿ, ಅವರ ನಡುವೆ ಹೋಗಿ ಇರುವುದು ಕಷ್ಟವಿತ್ತು. ಚಿಕಿತ್ಸೆಗಾಗಿ ತಾಯಿಯನ್ನು ಭಾವೇಶ್, ರಾತ್ರಿ ಬಸ್ಸಿನಲ್ಲಿ ಮಹಾಬಲೇಶ್ವರದಿಂದ ಬಾಂಬೆಗೆ ಕರೆದೊಯ್ಯುತ್ತಿದ್ದರು. ಬೆಳಗ್ಗೆ ನಾಲ್ಕು ಗಂಟೆಗೇ ಬಾಂಬೆಯ ಎಲ್ಫಿಂಗ್ಸ್ಟನ್ ಪರೇಲ್ ಬಳಿ ಇಳಿದು, ಟಾಟಾ ಮೆಮೊರಿಯಲ್ ಆಸ್ಪತ್ರೆಗೆ ಹೋಗುತ್ತಿದ್ದರು. ಅಷ್ಟು ಮುಂಜಾನೆ ಆಸ್ಪತ್ರೆ

## ಇಲ್ಲಿಯವರೆಗೆ



ನೇಪಾಳದ ಸೈಕಲ್ ಯಾತ್ರೆ ಭಾವೇಶ್‌ರಿಗೆ ಸಾಹಸದ ಪಯಣವಷ್ಟೇ ಆಗಿರದೆ, ಲೋಕ ವ್ಯವಹಾರಗಳನ್ನು ಗ್ರಹಿಸುವ ಪಾಠಶಾಲೆಯೂ ಆಗಿತ್ತು. ಮೂವರು ಗೆಳೆಯರಿಗೂ ಸೇರಿದ ಹಣವನ್ನೆಲ್ಲ ಪುರುಷೋತ್ತಮನೇ ಕಬಳಿಸಿದ್ದು ಕೂಡ ಭಾವೇಶ್‌ರಿಗೆ ವ್ಯಾವಹಾರಿಕ ಪಾಠವೇ ಆಯಿತು. ಎಡರು ತೊಡರುಗಳ ನಡುವೆ ಮಿತ್ರರ ಸೈಕಲ್ ಯಾತ್ರೆ ಮತ್ತೆ ಊರಿಗೆ ಮುಟ್ಟಿದಾಗ, ಊರಿನಲ್ಲಿ ಹಬ್ಬದ ವಾತಾವರಣ. ಅವರೆಗೆ ಊರಿನಲ್ಲಿ ಹತ್ತರಲ್ಲಿ ಹನ್ನೊಂದರಂತಿದ್ದ ಯುವಕರು ಒಮ್ಮಿಂದೊಮ್ಮೆಗೆ ಊರಿನಲ್ಲಿ ಪ್ರಸಿದ್ಧರಾಗಿಬಿಟ್ಟರು. ಎಲ್ಲರೂ ಅವರ ಸ್ನೇಹಕ್ಕಾಗಿ ಹಂಬಲಿಸತೊಡಗಿದರು.

ತಲುಪಿದ ಕಾರಣ, ಸೆಕ್ಯುರಿಟಿಯವರ ಹತ್ತಿರ ಭಾವೇಶ್ ಕಾಡಿಬೇಡಿ ಅನುಮತಿ ಪಡೆದು ಅಮ್ಮನನ್ನು ಒಳಗೆ ಲಾಬಿಗೆ ಕರೆದೊಯ್ಯುತ್ತಿದ್ದರು. ಇಡೀ ರಾತ್ರಿಯ ಬಸ್ಸು ಪ್ರಯಾಣದಿಂದ ತಾಯಿಗೆ ಸಾಕಷ್ಟು ಸುಸ್ತಾಗಿರುತ್ತಿತ್ತು. ಅಲ್ಲಿದ್ದ ಕೆಲವು ಮೇಜುಗಳನ್ನು ಜೋಡಿಸಿ, ಆಯಾಸದಿಂದ ಕುಸಿದ ಅಮ್ಮನಿಗೆ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲು ಹೇಳುತ್ತಿದ್ದರು. ಇದೀಗ ಗಂಟೆ ಒಂಬತ್ತು ಆಗುವುದನ್ನೇ ಕಾಯುವರು. ಆಸ್ಪತ್ರೆಯ ಎದುರಿಗೇ ಚಹಾ ನಾಷ್ಟಾ ಸಿಗುತ್ತಿತ್ತು.

ವೈದ್ಯರ ಭೆಟ್ಟಿಗೆ ಕಾಯುವರು. ಇಲ್ಲಿ ಆಸ್ಪತ್ರೆಯಲ್ಲಿ ರೋಗಿಗೆ ಯಾವ ಬಗೆಯ ಫೈಲ್ ಮಾಡಿಸಿದ್ದೇವೆ ಎಂಬುದು ಮುಖ್ಯವಿತ್ತು. ಜನರಲ್ ಫೈಲ್ ಮತ್ತು ಪ್ರೈವೇಟ್ ಫೈಲ್ ಎಂಬ ಎರಡು ಬಗೆಯ ದಾಖಲಾತಿಗಳಿದ್ದವು. ಜನರಲ್ ಎಂದೊಡನೆ ಬಹಳ ಜನಸಂದಣಿ. ನೆಲದ ಮೇಲೂ ಜನರು ಮಲಗುವಷ್ಟು ಗುಂಪು ಗದ್ದಲ. ಪ್ರೈವೇಟ್ ಎಂದರೆ ಕಡಿಮೆ ಜನ ಇರುತ್ತಿದ್ದರು. ಅಲ್ಲಿ ಹೆಚ್ಚು ಸರತಿ ಸಾಲು ನಿಲ್ಲುವ ಅಗತ್ಯವಿಲ್ಲ, ಗಂಟೆಗಟ್ಟಲೆ ಕಾಯಬೇಕಿಲ್ಲ. ಫೈಲ್ ಯಾವುದು ಎಂಬುದರ ಮೇಲೆ ಚಿಕಿತ್ಸೆಯ ಖರ್ಚು ಎಷ್ಟು ಎಂದು ನಿರ್ಧಾರವಾಗುತ್ತಿತ್ತು.

ಅಲ್ಲಿಯವರೆಗೂ ಭಾವೇಶ್ ಕ್ಯಾನ್ಸರ್ ಕೆಲವೇ ಕೆಲವರಿಗೆ ತಗುಲುವ ಅಪರೂಪದ ರೋಗ ಎಂದುಕೊಂಡಿದ್ದರು. ಆದರೆ ಇಲ್ಲಿ ಆಸ್ಪತ್ರೆಯಲ್ಲಿ ನಾಲ್ಕು ವರ್ಷದ ಮಗುವಿನಿಂದ ಹಿಡಿದು ಎಂಬತ್ತು ವರ್ಷದ ಮುದುಕರವರೆಗೂ ಕ್ಯಾನ್ಸರ್ ರೋಗಿಗಳು ಭರ್ತಿಯಾಗಿದ್ದರು. ಯಾರೋ ಪಟ್ನಾದಿಂದ ಬಂದಿದ್ದರೆ, ಮತ್ಯಾರೋ ಕಲಕತ್ತಾದಿಂದ. ಸತ್ತ ಮೇಲೆ ಸ್ವರ್ಗ ಅಥವಾ ನರಕಕ್ಕೆ ಹೋಗುತ್ತೇವೆ ಅನ್ನುತ್ತಾರೆ. ಆದರೆ ಭಾವೇಶ್‌ಗೆ ಅನಿಸಿತ್ತು, ಬದುಕಿದ್ದಂತೆಯೇ ನರಕವನ್ನು ನೋಡಬೇಕು ಎಂದರೆ ಈ ಕ್ಯಾನ್ಸರ್ ಆಸ್ಪತ್ರೆಯ ಒಳಗೆ ಒಂದು ಇಣುಕು ಹಾಕಿದರೆ ಸಾಕು.

ಇಲ್ಲಿ ವೈದ್ಯರು ಕಡಿಮೆ ಇದ್ದರು, ರೋಗಿಗಳ ಸಂಖ್ಯೆ ಬಹಳ ಹೆಚ್ಚಿತ್ತು. ತಮ್ಮ ನಂಬರ್ ಬರುವುದಕ್ಕೆ ಎರಡು ಮೂರು ಗಂಟೆ ನಿರೀಕ್ಷಿಸಬೇಕಿತ್ತು. ವೈದ್ಯರು ತಪಾಸಣೆ ಮಾಡುವರು. ಅದರ ನಂತರ ರಕ್ತ ಪರೀಕ್ಷೆಗೆ ರಕ್ತ ನೀಡಬೇಕು. ಅದರಲ್ಲಿ ಬಿಳಿಯ ರಕ್ತ ಕಣಗಳ ಸಂಖ್ಯೆ ಸರಿ ಇದ್ದರೆ, ಆಗ ತಾಯಿಯನ್ನು ಡೇಕೇರ್‌ಗೆ ದಾಖಲೆ ಮಾಡಿ ಕೀಮೊಥೆರಪಿ ನೀಡಲಾಗುತ್ತಿತ್ತು. ಇದೆಲ್ಲ ಆದ ಮೇಲೆ ರಾತ್ರಿಯ ಬಸ್ಸಿನಲ್ಲಿ ಭಾವೇಶ್ ತಾಯಿಯನ್ನು ಮಹಾಬಲೇಶ್ವರಕ್ಕೆ ಕರೆದುಕೊಂಡು ಹಿಂತಿರುಗುತ್ತಿದ್ದರು. ರಾತ್ರಿ ತಣ್ಣನೆಯ ಹವೆಯಿಂದಾಗಿ ಅಮ್ಮನಿಗೆ ಒಂದಿಷ್ಟು ನೆಮ್ಮದಿ ಇರುತ್ತಿತ್ತು. ಮರುದಿನ ಚೆನ್ನಾಗಿ ನಿದ್ರೆ ಮಾಡುತ್ತಿದ್ದರು.

ಕೀಮೊ ಕಾರಣವಾಗಿ ಕ್ಯಾನ್ಸರ್ ಕೋಶಗಳಷ್ಟೆ ಅಲ್ಲ ದೇಹದ ಆರೋಗ್ಯಕರ ಜೀವಕೋಶಗಳೂ ನಾಶವಾಗುತ್ತವೆ. ಬಿಳಿಯ ರಕ್ತ ಕಣಗಳೂ ಇಳಿದುಹೋಗುತ್ತವೆ. ಅವುಗಳ ಸಂಖ್ಯೆ ಬಹಳಷ್ಟು ಕುಗ್ಗಿಹೋಗುವ ಸಾಧ್ಯತೆಯೂ ಇತ್ತು. ಹಾಗೆಂದೇ ಬಲು ಬೇಗನೆ ಸೋಂಕು ರೋಗಗಳು ಬಡಿಯುತ್ತಿದ್ದವು. ಭಾವೇಶ್ ಕೀಮೊ ಚಿಕಿತ್ಸೆಯ ನಂತರ ಅಮ್ಮನನ್ನು ಬಹಳ ಧ್ಯಾನವಿಟ್ಟು ನೋಡಿಕೊಳ್ಳುತ್ತಿದ್ದರು. ತಾಯಿ ಭಾವೇಶನಿಗೆ ಬಾಲ್ಯದಲ್ಲಿಯೇ ಅಡುಗೆ ಮಾಡುವುದನ್ನು ಕಲಿಸಿದ್ದರು. ಅವೆಲ್ಲವೂ ಈಗ ಉಪಯೋಗಕ್ಕೆ ಬಂದಿತು. ಅಮ್ಮನಿಗೆ ಎಲೆಕೋಸು, ಪಾಲಕ್ ಸೊಪ್ಪಿನ ಪಲ್ಯ ಮಾಡಿಕೊಡುವರು. ಕ್ಯಾರೆಟ್‌ನ ರಸ ತೆಗೆದು ಅವರಿಗೆ ಕುಡಿಸುವರು. ಅವರ ಬಿಳಿಯ ರಕ್ತ ಕಣಗಳು ಬೇಗನೆ ಹೆಚ್ಚಾಗಲಿ ಎಂಬ ಆಶಯದಲ್ಲಿ ಅವರಿಗೆ ತಿಳಿದ ಎಲ್ಲವನ್ನೂ ಮಾಡುವರು. ಒಂದೂ ಒಂದೂವರೆ ತಿಂಗಳ ನಂತರ, ಅಮ್ಮನನ್ನು ಮತ್ತೆ ಬಾಂಬೆಗೆ ಕೀಮೋಗೆ ಕರೆದೊಯ್ಯುತ್ತಿದ್ದರು.

ಬಸ್ಸಿನಲ್ಲಿ ಕುಳಿತಂತೆ ಭಾವೇಶ್ ಅವರದು ಆ ದೇವರಲ್ಲಿ ಒಂದೇ ಪ್ರಾರ್ಥನೆ. ದೇವರೆ, ಅಮ್ಮನ ಬಿಳಿಯ ರಕ್ತ ಕಣಗಳ ಸಂಖ್ಯೆ ಹೆಚ್ಚಿರಲಿ. ಇಲ್ಲದಿದ್ದರೆ ಕೀಮೊ ಇಲ್ಲದೆ ಹಿಂತಿರುಗಬೇಕಿತ್ತು. ಇಡೀ ಪ್ರಯಾಣ ವ್ಯರ್ಥವಾಗುತ್ತಿತ್ತು. ಚಿಕಿತ್ಸೆ ಇಲ್ಲದೆ, ಅಮ್ಮನಿಗೆ ಎಲ್ಲಿಲ್ಲದ ಆಯಾಸವಾಗುತ್ತಿತ್ತು.

ಆಸ್ಪತ್ರೆಯ ಹೊರಗೆ ಬಹಳಷ್ಟು ಕೈಗಾಡಿಗಳು ಇರುತ್ತಿದ್ದವು. ಅಲ್ಲಿ ಐದು ರೂಪಾಯಿಗೆ ಒಂದು ಸಣ್ಣ ತಟ್ಟೆಯಲ್ಲಿ ಅನ್ನ ಮತ್ತು ದಾಲ್ ಸಿಗುತ್ತಿತ್ತು. ಅದನ್ನೇ ತಿನ್ನುತ್ತಿದ್ದರು. ಹಣದ ಮುಗ್ಗಟ್ಟು ವಿಪರೀತವಾಗಿತ್ತು. ಕಾರಣ ಚಿಕಿತ್ಸೆಯ ನಂತರ ಕೈಯಲ್ಲಿ ಹಣ ಉಳಿದಿರುತ್ತಿರಲಿಲ್ಲ. ಟಾಟಾ